ಅಂಥ ಸಮಸ್ಯೆಯಿರಲಿಲ್ಲ. ಋಗ್ವೇದಿ ಅನೇಕ ವರ್ಷಗಳ ಕಾಲ ಮಠದಲ್ಲಿ ಬೆಳೆದಿದ್ದರಿಂದ ಎಲ್ಲಾ ತರಹದ ತಿಂಡಿ, ಅಡುಗೆಗಳನ್ನು ಮಾಡಲು ಕಲಿತಿದ್ದರಲ್ಲದೆ ಅರವತ್ತಾರು ವರ್ಷ ವಯಸ್ಸಿನಲ್ಲೂ ಗಟ್ಟಿಮುಟ್ಟಾಗಿದ್ದರು. ಈಗಲೂ ಋಗ್ವೇದಿ ಎಂಥ ಚಳಿಗಾಲದಲ್ಲೂ ತಣ್ಣೀರಿನಲ್ಲಿಯೇ ಸ್ನಾನ ಮಾಡುತ್ತಾರೆ. ತಮ್ಮ ಇಂದಿನ ಈ ಸ್ಥಿತಿಗೆ ಕಾರಣವಾದ ಮಠವನ್ನೂ, ಸ್ವಾಮೀಜಿಯವರನ್ನೂ ಆಗಾಗ ನೆನಪು ಮಾಡಿಕೊಳ್ಳುತ್ತಾರೆ. ಆದರೆ, ಅದೇ ಮಠಕ್ಕೆ ಇಷ್ಟೆಲ್ಲಾ ವರ್ಷಗಳಲ್ಲಿ ಒಂದು ನಯಾಪೈಸೆ ಡೊನೇಶನ್ ಕೊಟ್ಟವರಲ್ಲ ಋಗ್ವೇದಿ. ಅಂಥದ್ದೊಂದು ಕೆಲಸವನ್ನು ತಾವು ಮಾಡಬೇಕಿತ್ತೆಂಬ ಅರಿವು ಅವರ ಮನಸ್ಸಿಗೆ ಹೊಳೆದಿಲ್ಲವೇನೋ; ಯಾರಿಗೆ ಗೊತ್ತು.

ಅದಿರಲಿ, ಕಳೆದ ಭಾನುವಾರ ಹನ್ನೆರಡೂವರೆಗೆ ಕ್ಲಬ್ಬಿಗೆ ಹೋದಾಗ ಕ್ಲಾಸ್‌ಮೇಟ್ ಪ್ರಜ್ಞಾ ಜೋಶಿ ಸಿಕ್ಕಿದ್ದಳು. ಅವಳು ನಿವೃತ್ತ ಐಎಎಸ್ ಆಫೀಸರ್. ಅವಳ ನಿವೃತ್ತಿಗೆ ಇನ್ನೂ ಐದು ವರ್ಷ ಇರಬೇಕಾದರೆ ರಾಜ್ಯ ಸರ್ಕಾರದ ಇಲಾಖೆಯೊಂದರಲ್ಲಿ ಅಧಿಕಾರಿಯಾಗಿದ್ದ ಗಂಡ ಹೃದಯಾಘಾತವಾಗಿ ಸತ್ತುಹೋಗಿದ್ದ. ಕೆಲವರು ಪ್ರಜ್ಞಾ ಜೋಶಿಯ ಟಾರ್ಚರ್‌ನಿಂದಾಗಿ ಗಂಡನಿಗೆ ಹಾರ್ಟ್ ಅಟ್ಯಾಕ್ ಆಯಿತೆಂದು, ಹಾಗಾಗಿ ಅದು ಕೊಲೆಯೆಂದು ಮಾತನಾಡಿಕೊಳ್ಳುತ್ತಿದ್ದರು. ಗಂಡನ ಕಡೆಯವರು ಪೊಲೀಸ್ ಕಂಪ್ಲೇಂಟ್ ಲಾಡ್ಜ್ ಮಾಡಿದ್ದರು ಕೂಡಾ. ಪ್ರಜ್ಞಾ ಜೋಶಿ ಉನ್ನತ ಹುದ್ದೆಯಲ್ಲಿದ್ದ ಕಾರಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಿಲ್ಲ. ಬಿ.ಎಸ್ಸಿ.ಯಲ್ಲಿ ಋಗ್ವೇದಿಯ ಕ್ಲಾಸ್‌ಮೇಟ್ ಆಗಿದ್ದ ಪ್ರಜ್ಞಾ ಜೋಶಿ ಡೈರೆಕ್ಟಾಗಿ ಐಎಎಸ್ ಕಟ್ಟಿದ್ದಳು. ಇಬ್ಬರೂ ಟಚ್‌ನಲ್ಲಿದ್ದರು. ಋಗ್ವೇದಿಯವರನ್ನು ಕಂಡ ಪ್ರಜ್ಞಾ ಜೋಶಿ ಬಾಬ್ ಕಟ್ ಮಾಡಿದ ಕೂದಲನ್ನು ಹಿಂದಕ್ಕೆ ಸರಿಸಿಕೊಳ್ಳುತ್ತಾ, ''ಏನೋ ಪ್ರೊಫೆಸರ್ ಋಗ್ವೇದಿ, ನೋಡಿ ಬಹಳ ದಿನ ಆಯ್ತು. ಆರಾಮಿದ್ದೀಯಾ, ಬಾ ಜೊತೆಯಲ್ಲೆ ಊಟ ಮಾಡೋಣ.'' ಎಂದು ಕರೆದಿದ್ದಳು. ಋಗ್ವೇದಿ ಹೋಗಿ ಅವಳ ಟೇಬಲ್ಲಿನಲ್ಲೆ ಕುಳಿತಿದ್ದರು. ಅವಳು ಎರಡು ಪೆಗ್ ಜಿನ್ ಹೇಳಿದ್ದಳು. ಋಗ್ವೇದಿ ಮೂರು ಪೆಗ್ ರೆಡ್ ವೈನ್ ಹೇಳಿದ್ದರು. ಎರಡು ಸಿಪ್ ಜಿನ್ ಕುಡಿದ ಪ್ರಜ್ಞಾ ಜೋಶಿ, ''ನಮ್ಮ ಜೂನಿಯರ್ ಮುಕುಂದ ರಾವ್ ಗೊತ್ತಲ್ಲಾ. ಅದೇ ಬ್ಯಾಡ್ಮಿಂಟನ್ ಚಾಂಪಿಯನ್. ಡಿ.ಆರ್.ಡಿ.ಓ.ದಲ್ಲಿ ಸೈಂಟಿಸ್ಟ್ ಆಗಿದ್ದ. ನಂಗೆ ತುಂಬಾ ಕ್ಲೋಸಾಗಿದ್ದ. ಮೊನ್ನೆ ರಾತ್ರಿ ಆತ್ಮಹತ್ಯೆ ಮಾಡ್ಕೊಂಡ. ಎಂಥ ಕವ್ವಾರ್ಡ್ ಬೇಕೂಫ.'' ಎಂದು ಮಾತು ತೆಗೆದಿದ್ದಳು. ''ಆಂ, ಗೊತ್ತು ಏನಾಗಿತ್ತು.'' ವೈನ್ ಗುಟುಕರಿಸಿ ಕೇಳಿದ್ದರು ಋಗ್ವೇದಿ. ಅವಳು ಮತ್ತೊಂದು ಸಿಪ್ ಜಿನ್ ಗುಟುಕರಿಸಿ, ''ಅರೆ, ಕಾರಣ ಕೇಳಿದ್ರೆ ನಗ್ತೀಯ ನೀನು. ಅವರ ಮನೆಗೆ ಇಪ್ಪತ್ತೈದು ವರ್ಷದ ಹೆಂಗಸು ಕೆಲಸಕ್ಕೆ ಬರ್ತಿದ್ಲಂತೆ. ಮುಕುಂದ ರಾವ್ ಹೆಂಡ್ತಿ ಸೊಸೆ ಬಾಣಂತನಕ್ಕೆ ಅಂತ ಆರು ತಿಂಗಳು ಆಸ್ಟ್ರೇಲಿಯಾಗೆ ಹೋಗಿದ್ರಂತೆ. ಮುಕುಂದ ರಾವ್ ಆರು ತಿಂಗಳು ದಿಲ್ದಾರಾಗಿ ಇದ್ರಂತೆ. ಇನ್ನೂ ಎರಡು ತಿಂಗಳು ಬೇಕಾದ್ರೂ ಅಲ್ಲೆ ಇರು, ಪ್ರಾಬ್ಲಂ ಏನೂ ಇಲ್ಲ ಎಂದು ಹೆಂಡ್ತಿಗೆ ಹೇಳಿದ್ರಂತೆ. ಆದರೆ, ಅವರಿಗೂ ಅಲ್ಲಿ ಬೇಸರವಾಗಿ ವಾರದ ಹಿಂದೆ ವಾಪಸ್ಸು ಬಂದ್ರಂತೆ. ಮಾರನೆಯ ದಿನ ಕೆಲಸದ ಹುಡುಗಿ ಕೆಲಸಕ್ಕೆ ಬಂದಾಗ ವಾಶ್ ಬೇಸಿನ್‌ನಲ್ಲಿ ವಾಂತಿ ಮಾಡಿಕೊಂಡಿದ್ದಳಂತೆ. ತಾನು ಆಸ್ಟ್ರೇಲಿಯಾಗೆ ಹೋದಾಗ ಸಣ್ಣಗೆ ಇದ್ದ ಹುಡುಗಿ ಚನ್ನಾಗಿ ಮೈ ತುಂಬಿಕೊಂಡಿದ್ದಳಂತೆ. ಹೊಟ್ಟೆ ಬೇರೆ ಉಬ್ಬಿತ್ತಂತೆ. ಕೇಳಿದಾಗ ಬಸಿರಾಗಿರುವುದಾಗಿ ಹೇಳಿದಳಂತೆ. ಯಾವಾಗ ಮದುವೆಯಾದೆ ಎಂದು ಕೇಳಿದ್ದಕ್ಕೆ, ''ಮದುವೆ ಆಗಿಲ್ಲ ಅಮ್ಮನೋರೆ, ತಾವು ಹೋದಾಗಿನಿಂದ ಯಜಮಾನರೇ ಧೈರ್ಯ ತುಂಬಿ ಈ ರೀತಿ ಮಾಡಿದ್ದಾರೆ. ಊರಲ್ಲಿರುವ ಎರಡೆಕರೆ ಜಮೀನು ನನ್ನ ಹೆಸರಿಗೆ ಮಾಡ್ತಾರಂತೆ. ಅದಕ್ಕೆ ಗರ್ಭ ತೆಗಿಸ್ಬೇಡ, ಪರ್ಮನೆಂಟಾಗಿ ಜೊತೆಯಲ್ಲಿ ಇರುವೆಯಂತೆ ಅಂತ ಹೇಳಿದ್ರು...'' ಎಂದು ಶರೀರದ ರಹಸ್ಯವನ್ನು ಬಿಚ್ಚಿಟ್ಟಳಂತೆ. ಅಷ್ಟೇ, ವಾರದಿಂದ ಖಿನ್ನತೆಗೆ ಒಳಗಾಗಿದ್ದ ರಾವ್ ನಿನ್ನೆ ಹೆಂಡತಿಯ ಸೀರೆಯಿಂದಲೇ ನೇಣಾಕಿಕೊಂಡನಂತೆ.''